# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1216 |
| ಉತ್ತರಿಸಬೇಕಾದ ದಿನಾಂಕ | : | 18-03-2025 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೃಷಿ ಅಭಿವೃದ್ಧಿಗಾಗಿ ಶೇಕಡಾ 3%ರ ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು 10 ಲಕ್ಷದಿಂದ 15 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. 10 ಲಕ್ಷದಿಂದ 15 ಲಕ್ಷಕ್ಕೆ ಏರಿಕೆ ಮಾಡಿರುವ ಸಾಲದ ಮೊತ್ತವನ್ನು ಪೂರ್ಣ ಪ್ರಮಾಣದಲ್ಲಿ ಇದುವರೆಗೆ ಎಷ್ಟು ವಿತರಣೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು); | 2023-24 ನೇ ಸಾಲಿನ ಆಯವ್ಯಯ ಮಂಡನೆ ಸಂದರ್ಭದಲ್ಲಿ ಶೇ.3 ರ ಬಡ್ಡಿ ದರದಲ್ಲಿ ವಿತರಿಸುವ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಮಿತಿಯನ್ನು ರೂ.10 ಲಕ್ಷದಿಂದ ರೂ.15 ಲಕ್ಷಕ್ಕೆ ಏರಿಸಲಾಗಿದ್ದು, ಈ ಮಿತಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 2023-24 ನೇ ಸಾಲಿನಲ್ಲಿ 456 ರೈತರಿಗೆ ರೂ.63.73 ಕೋಟಿ ಮತ್ತು 2024-25 ನೇ ಸಾಲಿನಲ್ಲಿ ದಿ.28-02-2025 ರ ವರೆಗೆ 843 ರೈತರಿಗೆ ರೂ.111.70 ಕೋಟಿ ಮೊತ್ತದ ಸಾಲ ವಿತರಿಸಿರುತ್ತವೆ.<br>ಪಿಕಾರ್ಡ್ ಬ್ಯಾಂಕ್‌ಗಳು 2023-24 ನೇ ಸಾಲಿನಲ್ಲಿ 326 ರೈತರಿಗೆ ರೂ.37.52 ಕೋಟಿ ಮತ್ತು 2024-25 ನೇ ಸಾಲಿನಲ್ಲಿ ದಿ.28-02-2025 ರ ವರೆಗೆ 391 ರೈತರಿಗೆ ರೂ.43.59 ಕೋಟಿ ಮೊತ್ತದ ಸಾಲ ವಿತರಿಸಿರುತ್ತವೆ.<br><br>ಜಿಲ್ಲಾವಾರು ಸಾಲದ ಮಾಹಿತಿಯನ್ನು ಅನುಬಂಧ ದಲ್ಲಿ ಸಲ್ಲಿಸಿದೆ. |
| ಆ) | ಯಾವುದೇ ಪ್ರಾಥಮಿಕ ಸಹಕಾರ ಸಂಘಗಳು 10 ಲಕ್ಷಕ್ಕಿಂತ ಜಾಸ್ತಿ ವಿತರಣೆ ಮಾಡುತ್ತಿಲ್ಲವೆಂಬ ದೂರುಗಳು ಕೇಳಿ ಬಂದಿದ್ದು, ಅದಕ್ಕೆ ಕಾರಣಗಳೇನು ಹಾಗೂ ಏರಿಕೆ ಮಾಡಿರುವ ಪ್ರಕಾರ ಪೂರ್ಣ ಪ್ರಮಾಣದಲ್ಲಿ ಸಾಲದ ಮೊತ್ತದ ವಿತರಣೆಗೆ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು: | ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳಿಗೆ ಸಂಬಂಧಿಸಿದ ಪ್ರತೀ ಯೋಜನೆಗೆ ನಬಾರ್ಡ್ ನಿಗದಿಪಡಿಸಿದ ಘಟಕವಾರು ಯುನಿಟ್ ಕಾಸ್ಟ್ ಅನ್ವಯ ರೈತರು ಕೃಷಿ ಅಭಿವೃದ್ಧಿಗೆ ಉದ್ದೇಶಿಸಿರುವ ಯೋಜನೆ, ಯೋಜನೆ ವಿಸ್ತೀರ್ಣ, ಒದಗಿಸಿದ ಭದ್ರತೆ ಮತ್ತು ಯೋಜನೆಯಿಂದ ಸೃಷ್ಟಿಯಾಗುವ ಮರುಪಾವತಿ ಸಾಮರ್ಥ್ಯ ಆಧರಿಸಿ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಡಿಸಿಸಿ ಬ್ಯಾಂಕುಗಳು ಪ್ರತೀ ರೈತರಿಗೆ ರೂ.15.00 ಲಕ್ಷಗಳ ವರೆಗೆ ಗರಿಷ್ಟ ಸಾಲದ ಪ್ರಮಾಣವನ್ನು ನಿಗದಿಪಡಿಸಬೇಕಿರುತ್ತದೆ. 21 ಡಿಸಿಸಿ ಬ್ಯಾಂಕುಗಳ ಪೈಕಿ 7 ಬ್ಯಾಂಕುಗಳಾದ ರಾಯಚೂರು, ಗುಲಬರ್ಗಾ, ಬಳ್ಳಾರಿ, ಬೀದರ್, ಬಾಗಲಕೋಟೆ, ಚಿಕ್ಕಮಗಳೂರು, ದಾವಣಗೆರೆ ಬ್ಯಾಂಕುಗಳಲ್ಲಿ ಮಾತ್ರ ರೂ.10 ಲಕ್ಷಕ್ಕಿಂತ ಹೆಚ್ಚಿನ ಸಾಲ ವಿತರಣೆಗೆ ಬಂಡವಾಳ ಕೊರತೆ ಇರುವುದರಿಂದ ರೂ.10 ಲಕ್ಷಕ್ಕಿಂತ ಹೆಚ್ಚಿನ ಸಾಲವನ್ನು ವಿತರಿಸಲು ಸಾಧ್ಯವಾಗಿರುವುದಿಲ್ಲ.<br><br>2024-25 ನೇ ಸಾಲಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 70000 ರೈತರಿಗೆ ರೂ.1600.00 ಕೋಟಿ ಮತ್ತು |

| | | |
|---|---|---|
| | | ಪಿಕಾರ್ಡ್ ಬ್ಯಾಂಕುಗಳು 20000 ರೈತರಿಗೆ ರೂ.400.00 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಲು ಗುರಿ ನಿಗದಿಪಡಿಸಿದ್ದು, ದಿ.28-02-2025 ರ ವರೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು 39,151 ರೈತರಿಗೆ ರೂ.1350.75 ಕೋಟಿ ಮತ್ತು ಪಿಕಾರ್ಡ್ ಬ್ಯಾಂಕುಗಳು 23,307 ರೈತರಿಗೆ ರೂ.548.52 ಕೋಟಿ ಸಾಲ ವಿತರಿಸಿರುತ್ತವೆ. |
| ಇ) | ಯಾವ ಕಾಲಮಿತಿಯೊಳಗೆ, ಸದರಿ ಕೃಷಿ ಅಭಿವೃದ್ಧಿಗಾಗಿ ಶೇಕಡಾ 3% ರ ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಹೆಚ್ಚುವರಿ ಹಣವನ್ನು ಅರ್ಹ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದಲ್ಲಿ ನೀಡಲು ಸೂಕ್ತ ಕ್ರಮ ವಹಿಸಲಾಗುವುದು? | ದಿನಾಂಕ:31-03-2025 ರೊಳಗೆ 90000 ರೈತರಿಗೆ ರೂ.2000.00 ಕೋಟಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಣೆ ಗುರಿ ತಲುಪಲು ಕ್ರಮವಹಿಸಲಾಗಿದೆ. |

**ಸಂಖ್ಯೆ: ಸಿಒ 86 ಸಿಎಲ್ಎಸ್ 2025**

K. N. Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**

# ಅನುಬಂಧ

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: **1216** ಕ್ಕೆ ಮಾಹಿತಿ

ಶೇ.3 ರ ಬಡ್ಡಿ ದರದಲ್ಲಿ ವಿತರಿಸುವ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲದ ಮಿತಿಯನ್ನು ರೂ.10 ಲಕ್ಷದಿಂದ ರೂ.15 ಲಕ್ಷಕ್ಕೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವಿತರಿಸಿದ ಸಾಲದ ವಿವರ (ರೂ.ಕೋಟಿಗಳಲ್ಲಿ)

| ಕ್ರ. ಸಂ | ಜಿಲ್ಲೆ | 2023–24 | | | | 2024–25 | | | |
|---|---|---|---|---|---|---|---|---|---|
| | | ಪ್ಯಾಕ್ಸ್ ಗಳ ಮೂಲಕ | | ಪಿಕಾರ್ಡ್ ಬ್ಯಾಂಕ್ ಗಳ ಮೂಲಕ | | ಪ್ಯಾಕ್ಸ್ ಗಳ ಮೂಲಕ | | ಪಿಕಾರ್ಡ್ ಬ್ಯಾಂಕ್ ಗಳ ಮೂಲಕ | |
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಮೈಸೂರು | 1 | 0.25 | 5 | 0.56 | 0 | 0 | 7 | 0.76 |
| 2 | ಚಾಮರಾಜನಗರ | 0 | 0 | 4 | 0.49 | 0 | 0 | 6 | 0.69 |
| 3 | ಮಂಡ್ಯ | 0 | 0 | 2 | 0.25 | 0 | 0 | 4 | 0.45 |
| 4 | ಹಾಸನ | 70 | 7.8 | 0 | 0.00 | 367 | 52.6 | 2 | 0.20 |
| 5 | ಚಿಕ್ಕಮಗಳೂರು | 0 | 0 | 6 | 0.70 | 0 | 0 | 8 | 0.90 |
| 6 | ಕೊಡಗು | 56 | 7.28 | 63 | 7.18 | 113 | 14.86 | 65 | 7.38 |
| 7 | ದಕ್ಷಿಣ ಕನ್ನಡ | 1 | 0.13 | 29 | 3.48 | 2 | 0.21 | 31 | 3.41 |
| 8 | ಉಡುಪಿ | 0 | 0 | 5 | 0.55 | 2 | 0.27 | 7 | 0.77 |
| 9 | ಬೀದರ | 0 | 0 | 15 | 1.65 | 0 | 0 | 18 | 1.85 |
| 10 | ಕಲಬುರಗಿ | 0 | 0 | 7 | 0.77 | 0 | 0 | 10 | 0.97 |
| 11 | ಯಾದಗಿರ | 0 | 0 | 5 | 0.55 | 0 | 0 | 7 | 0.75 |
| 12 | ರಾಯಚೂರು | 0 | 0 | 2 | 0.22 | 0 | 0 | 4 | 0.42 |
| 13 | ಕೊಪ್ಪಳ | 0 | 0 | 4 | 0.55 | 0 | 0 | 7 | 0.75 |
| 14 | ವಿಜಯನಗರ | 0 | 0 | 0 | 0.00 | 0 | 0 | 0 | 0.00 |
| 15 | ಬಳ್ಳಾರಿ | 0 | 0 | 0 | 0.00 | 0 | 0 | 1 | 0.10 |
| 16 | ಬೆಂ.ನಗರ | 7 | 0.72 | 11 | 1.49 | 4 | 0.53 | 13 | 1.69 |
| 17 | ಬೆಂ.ಗ್ರಾ. | 35 | 3.85 | 4 | 0.55 | 32 | 3.65 | 6 | 0.75 |
| 18 | ರಾಮನಗರ | 86 | 10.28 | 1 | 0.12 | 76 | 9.98 | 3 | 0.33 |
| 19 | ಕೋಲಾರ | 5 | 0.95 | 22 | 2.53 | 3 | 0.45 | 25 | 2.73 |
| 20 | ಚಿಕ್ಕಬಳ್ಳಾಪುರ | 2 | 0.24 | 6 | 0.75 | 1 | 0.15 | 8 | 0.95 |
| 21 | ತುಮಕೂರು | 159 | 27.3 | 12 | 1.44 | 125 | 13.62 | 14 | 1.64 |
| 22 | ಚಿತ್ರದುರ್ಗ | 9 | 1.4 | 9 | 0.90 | 15 | 2.2 | 12 | 1.10 |
| 23 | ದಾವಣಗೆರೆ | 0 | 0 | 4 | 0.46 | 0 | 0 | 7 | 0.66 |
| 24 | ಶಿವಮೊಗ್ಗ | 9 | 1.32 | 0 | 0.00 | 7 | 1.05 | 1 | 0.12 |
| 25 | ಬೆಳಗಾವಿ | 0 | 0 | 17 | 1.95 | 19 | 2.57 | 19 | 2.15 |
| 26 | ವಿಜಯಪೂರ | 0 | 0 | 19 | 2.04 | 20 | 2.6 | 21 | 2.24 |
| 27 | ಬಾಗಲಕೋಟೆ | 0 | 0 | 23 | 2.61 | 0 | 0 | 25 | 2.81 |
| 28 | ಧಾರವಾಡ | 0 | 0 | 4 | 0.44 | 4 | 0.51 | 6 | 0.66 |
| 29 | ಗದಗ | 9 | 1.35 | 3 | 0.34 | 8 | 1 | 5 | 0.54 |
| 30 | ಹಾವೇರಿ. | 7 | 0.86 | 3 | 0.34 | 35 | 4.14 | 5 | 0.54 |
| 31 | ಉತ್ತರ ಕನ್ನಡ | 0 | 0 | 41 | 4.61 | 10 | 1.31 | 44 | 5.28 |
| | ಒಟ್ಟು | **456** | **63.73** | **326** | **37.52** | **843** | **111.7** | **391** | **43.59** |

ಸಹಕಾರ ಸಂಘಗಳ ಅಪರ ನಿಬಂಧಕರು,(ಪತ್ತು)